# ‘ತಿದ್ದುವ ಹೊರೆ ನಮಗೇಕೆ?’

ಸಿನಿಮಾಗಳಿಂದ ಸಮಾಜ ಹಾಳಾಗುತ್ತಿದೆ ಎಂಬ ಆರೋಪ ಇಂದಿನದ್ದಲ್ಲ. ಅಪರಾಧಗಳನ್ನು ಬಿಂಬಿಸುವ ಚಿತ್ರಗಳು ಜನರ ಮನಸ್ಥಿತಿಯ ಮೇಲೆ ಪರಿಣಾಮ ಬೀರಿದ ಮತ್ತು ಅವರು ಅದನ್ನು ಅನುಸರಿಸಿದ ಅನೇಕ ಉದಾಹರಣೆಗಳಿವೆ. ಆದರೆ, ಮೌಲ್ಯಗಳ ಕುಸಿತ, ಅಪರಾಧಗಳ ಹೆಚ್ಚಳ ಮುಂತಾದ ನಕಾರಾತ್ಮಕ ಅಂಶಗಳ ಹೆಚ್ಚಳಕ್ಕೆ ಸಿನಿಮಾಗಳು ಮಾತ್ರ ಕಾರಣವೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಸಮಾಜವನ್ನು ತಿದ್ದುವ ಕೆಲಸವನ್ನು ಸಿನಿಮಾಗಳು ಮಾಡಬೇಕು ಎನ್ನುವುದು ಕೆಲವರ ಅಂಬೋಣ. ಸಿನಿಮಾಗಳು ಸಮಾಜವನ್ನು ಪರಿವರ್ತಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಲೇ ಬಾರದು ಎನ್ನುವುದು ರಿಚಾ ಚಡ್ಡಾ ಅಭಿಪ್ರಾಯ. “ಈ ತಿದ್ದುವ ಮತ್ತು ಸಂದೇಶ ನೀಡುವ ಕೆಲಸ ಮಾಡಬೇಕಿರುವುದು ರಾಜಕೀಯ ಮುಖಂಡರೇ ಹೊರತು ನಟರಲ್ಲ’ ಎನ್ನುತ್ತಾಳೆ ಆಕೆ.

‘ನಾವು ಒಳ್ಳೆಯ ಸಿನಿಮಾಗಳನ್ನು ಮಾಡಬೇಕು. ಅದರಲ್ಲಿ ಗಟ್ಟಿ ಕಥೆ, ಅರ್ಥವಂತಿಕೆ ಮತ್ತು ಒಂದಷ್ಟು ಜನರನ್ನು ಸಕಾರಾತ್ಮಕವಾಗಿ ಪ್ರಭಾವಿಸುವಂತಹ ವಸ್ತುಗಳಿರಬೇಕು. ಅದರ ಹೊರತಾಗಿ ಸಮಾಜವನ್ನು ತಿದ್ದುತ್ತೇವೆ ಎಂಬ ಸಂದೇಶಗಳನ್ನು ನೀಡುವ ಹೊರೆಯನ್ನು ಹೊತ್ತುಕೊಳ್ಳಬಾರದು’ ಎಂದಿದ್ದಾಳೆ ಆಕೆ.

‘ಹಾಗೆಂದು, ನಿರ್ದೇಶಕರು ಮತ್ತು ಕಲಾವಿದರಿಗೆ ಹೊಣೆಗಾರಿಕೆಯಿಲ್ಲ ಎಂದರ್ಥವಲ್ಲ. ತೆರೆಯ ಮೇಲೆ ಅನೈತಿಕ ಎನಿಸುವ ಸಂಗತಿಗಳನ್ನು ತೋರಿಸಬಾರದು. ಮಹಿಳೆಯರು, ಸಮುದಾಯಗಳನ್ನು ಕೆಟ್ಟದಾಗಿ ಚಿತ್ರಿಸುವುದನ್ನು ನಿಯಂತ್ರಿಸಬೇಕು. ಅಪರಾಧ ಕುರಿತ ಚಿತ್ರಗಳಲ್ಲಿ ಅದನ್ನು ವೈಭವೀಕರಿಸಲಾಗುತ್ತಿದೆ ಎಂದು ದೂರಲಾಗುತ್ತದೆ. ಆದರೆ ನಾವು ಕಥೆಯೊಂದನ್ನು ಹೇಳುತ್ತಿರುತ್ತೇವೆ ಅಷ್ಟೇ’ ಎಂದಿದ್ದಾಳೆ. ಅಪರಾಧ ಹಿನ್ನೆಲೆಯ ಕಥೆಗಳುಳ್ಳ ಸಿನಿಮಾಗಳಲ್ಲಿ ರಿಚಾ ನಟಿಸಿದ್ದಾಳೆ. ಕಥೆಗಳಾಗಿ ಅವು ಗಮನ ಸೆಳೆದಷ್ಟೇ, ಅಪರಾಧದ ವೈಭವೀಕರಣದಿಂದಲೂ ಚರ್ಚೆಗೆ ಒಳಗಾಗಿವೆ. ತೆರೆಯ ಮೇಲೆ ಯಾವುದನ್ನು ತೋರಿಸಬಾರದು ಎಂಬ ನಿಯಂತ್ರಣದಂತೆ, ಯಾವುದನ್ನು ತೋರಿಸಬೇಕು ಎಂಬ ಹೊಣೆಗಾರಿಕೆ ಹೊರುವುದು ಭಾರವಲ್ಲ, ಅದು ಕರ್ತವ್ಯ ಎನ್ನುವುದು ಕೆಲವರ ಪ್ರತಿಕ್ರಿಯೆ.





# ಕನ್ಯತ್ವದ ಯೋಚನೆ!

ಆಧುನಿಕ ಕಾಲದ ಯುವಕರು ತಾವು ಮದುವೆಯಾಗಲಿರುವ ಯುವತಿಯ ಕನ್ಯತ್ವದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ, ಸಮಾಜ ಆ ಕೆಲಸ ಮಾಡುತ್ತದೆ– ನಟಿ ಪಿಯಾ ಬಾಜಪೇಯಿ ಹೇಳಿಕೆಯಿದು.

ಕಳೆದ ವರ್ಷ ‘ದಿ ವರ್ಜಿನ್ಸ್’ ಎಂಬ ಕಿರುಚಿತ್ರದಲ್ಲಿ ನಟಿಸಿದ್ದ ಪಿಯಾ, ಕನ್ಯತ್ವ ಎನ್ನುವುದು ಈಗ ದೊಡ್ಡ ಪ್ರಶ್ನೆಯೇ ಆಗಿ ಉಳಿದಿಲ್ಲ ಎನ್ನುತ್ತಾಳೆ. ಆಧುನಿಕ ಪುರುಷರಿಗೆ ಯುವತಿಯರ ಕನ್ಯತ್ವ ಯೋಚನೆಯ ಸಂಗತಿಯೇ ಅಲ್ಲ. ಆದರೂ ಅದನ್ನು ಸಮಾಜ ಕೇಳುತ್ತದೆ. ಅದಕ್ಕಾಗಿಯೇ ಕನ್ಯತ್ವವನ್ನು ಮರಳಿ ಸ್ಥಾಪಿಸುವಂತಹ ಶಸ್ತ್ರಚಿಕಿತ್ಸೆಗಳು ಸಣ್ಣ ಪಟ್ಟಣಗಳಲ್ಲಿ ನಡೆಯುತ್ತಿವೆ ಎನ್ನುತ್ತಾಳೆ ಪಿಯಾ. ಕೆಲವು ಪುರುಷರು ತಾನು ಮದುವೆಯಾಗಲಿರುವ ಯುವತಿ ಕನ್ಯೆಯಾಗಿಯೇ ಇರಬೇಕು ಎಂದು ಹುಡುಕುತ್ತಾರೆ, ನಿಜ. ಆದರೆ ಅದು ಅವರ ಕುಟುಂಬದ ಅಂದರೆ, ಹಿಂದಿನ ತಲೆಮಾರಿನ ಹಿರಿಯರ ಧೋರಣೆಯ ಸಲುವಾಗಿ ಎಂದಿದ್ದಾಳೆ ಆಕೆ.

‘ಮದುವೆಗೂ ಮುನ್ನ ದೈಹಿಕ ಸಮ್ಮಿಲನ ಈ ದಿನಗಳ ಸಂಬಂಧಗಳಲ್ಲಿ ಸರ್ವೇಸಾಮಾನ್ಯ. ಅರೇಂಜ್ ಮ್ಯಾರಿಯೇಜ್‌ಗಳಲ್ಲಿ, ಮೊದಲ ಸಲ ಭೇಟಿಯಾದಾಗ ಯುವತಿ ಕನ್ಯೆಯೇ ಅಥವಾ ಅಲ್ಲವೇ ಎನ್ನುವುದು ಹೇಗೆ ತಿಳಿಯುತ್ತದೆ? ಅದಕ್ಕೆ ಪುರಾವೆ ಏನಿರುತ್ತದೆ? ಯುವತಿಯಾಗಿ ನಾನು ಸ್ವಚ್ಛಂದತೆಯನ್ನು ಬೆಂಬಲಿಸುವುದಿಲ್ಲ. ಆದರೂ, ‘ಕನ್ಯತ್ವ’ ಉಳಿಸಿಕೊಳ್ಳಬೇಕೆಂಬ ಸಮಾಜದಲ್ಲಿನ ಮನಸ್ಥಿತಿ ಬದಲಾಗಬೇಕಿದೆ’ ಎನ್ನುವುದು ಆಕೆಯ ಅಭಿಪ್ರಾಯ.

ಬಿಟೌನ್‌ನಲ್ಲಿ ಈಗಷ್ಟೇ ಕಾಲಿಡುತ್ತಿರುವ ಪಿಯಾ, ತಾನು ಗಂಭೀರ ಸಂಗತಿಗಳ ಕುರಿತು ನಿರ್ಭೀತಿಯಿಂದ ಮಾತನಾಡಬಲ್ಲೆ ಎನ್ನುವುದನ್ನು ಸಾಬೀತುಪಡಿಸಿದ್ದಾಳೆ. ಹಾಗೆಯೇ ನಟಿಸಬಲ್ಲೆ ಎಂಬುದೂ ತೆರೆಯ ಮೇಲೆ ಗೊತ್ತಾಗಲಿದೆ ಎಂಬ ಸೂಚನೆ ನೀಡಿದ್ದಾಳೆ. ‘ಮಿರ್ಜಾ ಜೂಲಿಯಟ್’ ಚಿತ್ರದಲ್ಲಿ ಅತಿ ಬೋಲ್ಡ್ ಎನಿಸುವ ಪಾತ್ರದಲ್ಲಿ ಪಿಯಾ ನಟಿಸಿದ್ದಾಳಂತೆ.

■ ಅಮಿ